3

# ಪಾಪದ ಸಮಸ್ಯೆಗೆ ಪರಿಹಾರ

## (1 ಯೋಹಾನ 1:5-2:2)

*ರೂಪಾಂತರವಾದ ಜೀವಿತವು ಚೌಕಟ್ಟಿನ ಒಳಗೆ ಶುದ್ಧತೆಯನ್ನು ನಿರಂತರವಾಗಿ ಒದಗಿಸುವುದಾಗಿದೆ ...*

ಒಬ್ಬ ಕ್ರೈಸ್ತನು ಜೀವಿತದ ಎಲ್ಲಾ ಸಮಸ್ಯೆಗಳಿಂದ ಪಾರಾಗುವುದಿಲ್ಲ. ಕ್ರೈಸ್ತನಾದವನು ರೋಗಕ್ಕೆ ತುತ್ತಾಗಬಹುದು ಮತ್ತು ಮರಣಹೊಂದಬಹುದು. ಅವರು ತಮ್ಮ ಕೆಲಸವನ್ನು ಕಳೆದು ಕೊಳ್ಳಬಹುದು, ಅಥವಾ ಅವರ ಸ್ವ ಉದ್ಯೋಗವು ಮುರಿದು ಹೋಗಬಹುದು. ಅವರು ತಮ್ಮ ವೈಯಕ್ತಿಕ ಸಂಬಂಧದಲ್ಲಿ ಅಸಂತುಷ್ಟರಾಗಬಹುದು. ಅವರು ಕೌಟುಂಬಿಕ ಸಮಸ್ಯೆಯನ್ನು ಹೊಂದಿರಬಹುದು. ಆದರೆ ಒಬ್ಬ ಕ್ರೈಸ್ತನು ಎದುರಿಸಬಹುದಾದ ಅತೀ ದೊಡ್ಡ ಸಮಸ್ಯೆಯು ಆತನ ಆರೋಗ್ಯ, ಆರ್ಥಿಕ ಹಾಗೂ ಆತನ ಕೌಟುಂಬಿಕ ಸಮಸ್ಯೆಗಳಲ್ಲ ಅದು ಆತನ ಪಾಪದ ಸಮಸ್ಯೆಯೇ ಆಗಿದೆ.

ಕ್ರೈಸ್ತನು ಪಾಪದಿಂದ ರಕ್ಷಿಸಲ್ಪಟ್ಟಿರುತ್ತಾನೆ. ಆತನು ಯೇಸುವಿನಲ್ಲಿ ನಂಬಿಕೆಯಿಟ್ಟು (ಯೋಹಾನ 8:24), ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು (ಲೂಕ 13:3), ತನ್ನ ನಂಬಿಕೆಯನ್ನು ಅರಿಕೆ ಮಾಡಿದಾಗ (1 ತಿಮೋಥೆ 6:12) ಮತ್ತು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ (ಗಲಾತ್ಯ 3:27), ಆತನು ತನ್ನ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆಯುತ್ತಾನೆ (ಅಪೊಸ್ತಲರ ಕೃತ್ಯಗಳು 2:38). ಆ ವಿಷಯದಲ್ಲಿ ಆತನು ಮರುಹುಟ್ಟನ್ನು ಪಡೆದವನಾಗಿರುತ್ತಾನೆ; ಆತನು ಕರ್ತನ ಸಭೆಗೆ ಸೇರಿಸಲ್ಪಟ್ಟವನಾಗಿರುತ್ತಾನೆ; ಆತನು ರಕ್ಷಿಸಲ್ಪಟ್ಟವನಾಗಿದ್ದಾನೆ.

ಹಾಗಿದ್ದಾಗ್ಯೂ ಆ ಕ್ರೈಸ್ತನು ಪಾಪವನ್ನು ಮಾಡುತ್ತಾನೆ! ಆತನು ಪಾಪದಿಂದ ರಕ್ಷಿಸಲ್ಪಟ್ಟಿದ್ದಾಗ್ಯೂ, ಆತನ ರಕ್ಷಣೆಯು ಆತನನ್ನು ಪಾಪ ಮಾಡುವುದರಿಂದ ದೂರ ಇಡುವುದಿಲ್ಲ. ಆತನ ಪಾಪವು ನಿರಂತರವಾಗಿ ಆತನನ್ನು ಕಾಡುವುದಾಗಿದೆ. ಆತನು ಮೂರು ವಿಧಗಳಲ್ಲಿ ತನ್ನ ಪಾಪದ ಸಮಸ್ಯೆಯನ್ನು ನಿವಾರಿ ಸಲು ಪ್ರಯತ್ನಿಸಬಹುದು: (1) ತಾನು ಪಾಪವನ್ನು ತಿರುಗಿ ತಿರುಗಿ ಮಾಡುತ್ತಿರುವುದರಿಂದ ತಾನು ಇನ್ನೂ ರಕ್ಷಣೆ ಹೊಂದಿಲ್ಲ ಎಂದು ಆತನು ನಿರ್ಧರಿಸಿರುತ್ತಾನೆ. ಆತನು ಮತ್ತೇ ಲೋಕದ ರೀತಿಗೆ ಮರಳ ಬಹುದು ಅಥವಾ ಮರು ದೀಕ್ಷಾಸ್ನಾನದ ಮೂಲಕ ಮತ್ತೇ ರಕ್ಷಣೆಗಾಗಿ ಎದುರು ನೋಡ ಬಹುದು. (2) ಪಾಪ ಮಾದೇ ಜೀವಿಸುವದು ಅಸಾಧ್ಯ ಎಂದು ನಿರ್ಧರಿಸುವದರಿಂದ, ಕ್ರೈಸ್ತನಾಗುವ ಯೋಚನೆಯನ್ನು ಬಿಡುವ ಸಾಧ್ಯತೆಯು ಇದೆ. ದೇವರ ಮಗುವಾಗಿರಲು ತನ್ನನ್ನು ತಾನು "ಬಲು ಅಶಕ್ತ" ಎಂದೂ, "ಬಲು ಅಯೋಗ್ಯ" ಎಂದು "ಹಿಂದೆ ಬೀಳುವ" ಸಾಧ್ಯತೆಯು ಇದೆ. (3) ಏನೇ ಆಗಲಿ ಆತನು ಪಾಪಮಾಡುತ್ತಿರುವುದರಿಂದ, ಆತನು ಅದರ ಬಗೆಗೆ ಯೋಚಿ ಸದೇ ಲೌಕಿಕವಾಗಿ ಸಂತೋಷಿಸುವ ಸಾಧ್ಯತೆಯು ಇದೆ. ಹೀಗೆ ಆತನು ಕ್ರೈಸ್ತನಾಗಿ ಕೂಡಾ ಪಾಪದಲ್ಲಿ ಮುಂದುವರೆಯುವುದರ ಸಾಧ್ಯತೆಯು ಇದೆ.

ಇವುಗಳಲ್ಲಿ ಯಾವವೂ ಇದಕ್ಕೆ ಪರಿಹಾರಗಳಲ್ಲ. ಆದರೆ ಬೈಬಲ್, ಸಹಾಯವನ್ನು ಒದಗಿಸುವುದಾಗಿದೆ ವಿಶೇಷವಾಗಿ, 1 ಯೋಹಾನ 2:1, 2ರಲ್ಲಿ ಅದರ ಸಂದರ್ಭದೊಂದಿಗೆ,

ಯೋಹಾನನಿಂದ ಪಾಪದ ಸಮಸ್ಯೆಗೆ ಪರಿಹಾರವು ಪ್ರಸ್ತುತಪಡಿಸಲ್ಪಟ್ಟಿದೆ. ಆತನು ಪಾಪದ ಬಗೆಗೆ ಮತ್ತು ಕ್ರೈಸ್ತನಿಗೆ ಸಂಬಂಧಿಸಿದಂತೆ ನಾಲ್ಕು ಸಂಗತಿಗಳನ್ನು ಮಾಡಿದ್ದಾನೆ.

## ಕ್ರೈಸ್ತನು ಪಾಪವನ್ನು ಮಾಡಬಾರದು

"ನೀವು ಪಾಪ ಮಾಡದಂತೆ ಈ ಮಾತುಗಳನ್ನು ನಾನು ಬರೆಯುತ್ತೇನೆ" ಎಂದು ಯೋಹಾನನು ಹೇಳುತ್ತಾನೆ (1 ಯೋಹಾನ 2:1). (1 ಯೋಹಾನ 2:15, 62; ಗಲಾತ್ಯ 5:19-22; ರೋಮಾಪುರ 6:12-14 ನ್ನು ಸಹ ನೋಡಿರಿ.)

ಯೋಹಾನನ ಓದುಗರಿಗೆ ಈ ಸಂದೇಶದ ಅವಶ್ಯಕತೆಯು ಇತ್ತು. ವಾಸ್ತವ ವಾಗಿ ಅವರಲ್ಲಿ ಕೆಲವರು ಆರಂಭಿಕ ಹಂತದಲ್ಲಿರುವಂತದಲ್ಲಿರುವ ಗ್ನೋಟೀಸೀಸ್ (Gnosticism) ತಪ್ಪಾದ ಬೋಧನೆಯನ್ನು ಒಪ್ಪಿಕೊಂಡಿರುವದಾಗಿ ಕಂಡುಬರುತ್ತದೆ ಗ್ನೋಟೀಸೀಸ್‌ಮ್‌ದಲ್ಲಿ (Gnosticism) ಅನೇಕ ವಿಧಗಳು ಇವೆ, ಆದರೆ ಅವೆಲ್ಲಗಳಲ್ಲಿ ಒಂದು ಸಾಮಾನ್ಯ ಸಂಗತಿಯನ್ನು ನಾವು ಕಾಣುತ್ತೇವೆ: ದೇಹವಾಗಲಿ - ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರತಿಯೊಂದೂ ಕೆಟ್ಟವುಗಳು ಆಗಿವೆ; ಆದರೆ ಆತ್ಮವು ಅದಕ್ಕೆ ಹೊಂದಿಕೊಂಡಿರುವ ಪ್ರತಿಯೊಂದು ಸಂಗತಿಗಳು ಒಳ್ಳೆಯವು ಎಂದು ಅವರು ಯೋಚಿಸುವವರಾಗಿದ್ದರು.

ದೈವಶಾಸ್ತ್ರೀಯವಾಗಿ, ಯೇಸುವು ದೇಹ ಸ್ವರೂಪದಲ್ಲಿ ಇರುವುದರಿಂದ ಆತನು ನಿಜ ವಾಗಿ ದೇವರಾಗಲಾರನು ಎಂದು ಗ್ನೋಟೀಸೀಸಮ್‌ದ ವಾದವು ಪ್ರತಿಪಾದಿಸುವುದಾಗಿದೆ. ದೇವರು ಆತ್ಮ ಸ್ವರೂಪನಾಗಿದ್ದರಿಂದ ಮಾಂಸಧಾರಿಯಾದ ಪಾಪಮಯ ದೇಹದಲ್ಲಿ ಆತನು ವಾಸಿಸಲು ಸಾಧ್ಯವಿಲ್ಲ. ಹೀಗೆ ಕ್ರಿಸ್ತನು ಕೇವಲ ಮಾಂಸಧಾರಿಯಾಗಿ ಕಂಡನು ಎಂದು ಅವರು ವಾದಿಸುವವರಾಗಿದ್ದರು (ನೋಡಿರಿ 1 ಯೋಹಾನ 4:2, 3).

ನೈತಿಕವಾಗಿ, ಈ ನಂಬಿಕೆಯು ನಾಸ್ತಿಕರ ಬೋಧನೆಯನ್ನು ಎರಡು ತದ್ವಿರುದ್ಧ ವಿಚಾರಧಾರೆಗೆ ನಡೆಸುವುದಾಗಿದೆ. ಶರೀರವು ಕೆಟ್ಟದ್ದಾಗಿರುವುದರಿಂದ ಒಬ್ಬ ಕ್ರೈಸ್ತನು ಶಾರೀಕ ಸ್ವಭಾವವನ್ನು ಸಂಪೂರ್ಣ ತ್ಯಜಿಸಬೇಕು. ಈ ಬೋಧನೆಯು ಜನರನ್ನು ಕೊರೆಯುವ ಹವೆಗೆ ಒಡ್ಡುವುದಕ್ಕೆ, ತಮ್ಮನ್ನು ತಾವು ಹೊಟ್ಟೆಗಿಲ್ಲದೆ ಸಾಯುವುದಕ್ಕೆ, ಅಥವಾ ಕಲ್ಲಿನಿಂದ ಕತ್ತರಿಸಿಕೊಳ್ಳುವುದಕ್ಕೆ ನಡೆಸುವಂತದ್ದು ಆಗಿರಬಹುದು. ಇನ್ನೊಂದು ಹಂತದಲ್ಲಿ ದೇಹವು ಯಾವ ಪರಿಣಾಮವನ್ನು ಬೀರದು ಯಾಕೆಂದರೆ ದೇಹದಲ್ಲಿ ಆತ್ಮವು ವಾಸಿಸುವುದಿಲ್ಲ ಎಂದು ವಾದಿಸಿರುವರು, ಹೀಗಾಗಿ ಕ್ರೈಸ್ತನು ತಾನು ಬಯಸಿದಂತೆ ಜೀವಿಸಬಹುದು - ಆತನು ಕುಡುಕನಾಗಿರಬಹುದು, ಫೋಲಿಯಾಗಿರಬಹುದು, ವ್ಯಭಾಚಾರಿಯಾಗಿರಬಹುದು - ಹೀಗೆ ಮಾಡುವುದರಿಂದ ಯಾವ ಪರಿಣಾಮವೂ ಆಗದು ಎಂದು ನಂಬುವವರಿರುತ್ತಾರೆ. ಹೇಗೋ, ಆತ್ಮವು ಮಾತ್ರ ಒಳ್ಳೆಯದಾಗಿದ್ದು ದೇವರೊಂದಿಗೆ ಹೊಂದಿಕೊಂಡಿದ್ದು ಆಗಿದ್ದು, ದೇಹವು ಏನೇ ಮಾಡಿದರೂ ಅದು ಆತ್ಮಕ್ಕೆ ತಟ್ಟದು.

ಯೋಹಾನನ ಕೆಲ ಓದುಗರು ಈ ವಿಚಾರವನ್ನು ಹಂಚಿಕೊಂಡಿರಬಹುದು. ಯಾಕೆಂದರೆ "... ದೇವರು ಬೆಳಕಾಗಿದ್ದಾನೆ ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬುದೇ. ನಾವುದೇವರ ಸಂಗಡ ಅನ್ಯೋನ್ಯವುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ" (1 ಯೋಹಾನ 1:5, 6).

ಅವರು ಬಹುಶ, "ನಾವು ದೇವರೊಂದಿಗೆ ಅನ್ಯೋನ್ಯವುಳ್ಳವರಾಗಿದ್ದೇವೆ. ನಮ್ಮ ಅನೈತಿಕತೆಯು ನಿಜವಾಗಿಯೋ ಇದಕ್ಕೆ ಸಂಬಂಧಿಸದು, ಯಾಕೆಂದರೆ ನಮ್ಮ ಆತ್ಮವು ಶುದ್ಧವಾಗಿದೆ ಎಂದು ಹೀಗೆ ಹೇಳಿದ್ದಿರಬಹುದು." ಅದಕ್ಕೆ ಉತ್ತರರೂಪವಾಗಿ ಯೋಹಾನನು: "ನಿಮ್ಮ ಜೀವಿತವು ಸುಳ್ಳಾಗಿದೆ. ನೀವು ಆತನ ಸ್ವಭಾವಕ್ಕೆ ಮತ್ತು ಆತನ ವಾಕ್ಯಕ್ಕೆ ವಿರುದ್ಧವಾದ ಮಾರ್ಗದಲ್ಲಿ ಜೀವಿಸುವವರೆಗೂ ಆಗಿದ್ದು ದೇವರೊಂದಿಗೆ ನಿಮ್ಮ ಅನ್ಯೋನ್ಯತೆಯನ್ನು ಹೊಂದಲಾರಿರಿ" ಎಂದು ಪ್ರತಿಕ್ರಯಿಸುತ್ತಾನೆ.

ಬಹುಶಃ ನಿಮಗೂ ಕೂಡಾ ಈ ಸಂದೇಶದ ಅವಶ್ಯಕತೆಯು ಇದೆ. ನಾವು ಪಾಪಮಾಡಬಾರದು! ಕೆಲ ಕ್ರೈಸ್ತರು ತಾವು ಪಾಪದಲ್ಲಿ ಇದ್ದೇವೆ ಎಂದು ತಿಳಿದ್ದಾರೆ, ಆದರೆ ನಾನಿರುವುದೇ ಹಾಗೆ "ಹೌದು ನಾನು ಬಹುವಾಗಿ ನನ್ನ ಸ್ಥಿಮಿತವನ್ನು ಕಳೆದು ಕೊಳ್ಳುತ್ತೇನೆ ಮತ್ತು ನಾನು ಕೆಲಸಾರಿ ನನ್ನನ್ನು ಹುಚ್ಚನನ್ನಾಗಿಸಿದಂಥ ಮನುಷ್ಯನಿಗೆ ಗುದ್ದಬೇಕೆಂದು ನನಗೆ ಅನ್ನಿಸುತ್ತದೆ, ಆದರೆ ಕೆಂಪು ತಲೆಯ ಐರಿಶ್ ಜನರು ಹೇಗಿರುತ್ತಾರೆ ಎಂದು ನೀವು ಬಲ್ಲಿರಲ್ಲವೇ!" ಎಂದು ಅವರು ಹೇಳುವವರಾಗಿರುತ್ತಾರೆ. ಆ ರೀತಿಯ ಸಂಗತಿಗಳನ್ನು ಕ್ರೈಸ್ತರು ಹೇಳುವಾಗ, ತಾವು ಪಾಪದಲ್ಲಿ ಇದ್ದಾರೆ ಮತ್ತು ಅದನ್ನು ಅವರು ಬಲ್ಲವರಾಗಿದ್ದಾರೆ, ಆದರೆ ಆ ಪಾಪದಿಂದ ಹೊರಬರುವಂಥ ವಿಚಾರವು ಅವರಿಗೆ ಇಲ್ಲ ಎಂದು ಅವರು ಹೇಳುವವರಾಗಿರುತ್ತಾರೆ. ಅವರು ಪಾಪಮಾಡುವುದನ್ನು *ದೇವರು ಬಯಸಲಾರನು ಎಂದು ಕ್ರೈಸ್ತರಿಗೆ ಅರಿತುಕೊಳ್ಳುವದು ಅವಶ್ಯವಿದೆ!*

ಮೊದಲ ಯೋಹಾನ 1:5, 6 ಸಹ ಕ್ರೈಸ್ತರಾದ ನಾವು ಯಾಕೆ ಪಾಪಮಾಡಬಾರದೆಂದು ಹೇಳುತ್ತದೆ. ಬೆಳಕಿನಲ್ಲಿರುವ ದೇವರೊಂದಿಗೆ ಅನ್ಯೋನ್ಯತೆಯನ್ನು ಹೊಂದಿಕೊಂಡು ಕತ್ತಲೆಯಲ್ಲಿ ನಡೆಯುವದು ಅಥವಾ ಪಾಪದಲ್ಲಿ ಇರುವದು ಅಯೋಗ್ಯವಾಗಿರುತ್ತದೆ ಎಂದು ಯೋಹಾನನು ಹೇಳುತ್ತಾನೆ.

ಯೋಗ್ಯವಾದ ನಡತೆಯ ಸಂಗತಿಯನ್ನು ನಾವು ಅರಿತುಕೊಳ್ಳಬೇಕು. ಯುನೈಟೆಡ್ ಸಂಸ್ಥಾನದ ಅಧ್ಯಕ್ಷರು ವಿದೇಶೀರಾಜ್ಯದ ಮುಖ್ಯ ಕಚೇರಿಗೆ ಭೇಟಿ ಕೊಡುವುದನ್ನು ಊಹಿಸಿಕೊಳ್ಳಿರಿ. ಅಧ್ಯಕ್ಷರ ವಿಮಾನದ ಗಾಲಿಯ ಉರುಳುವಿಕೆಯು ನಿಂತಿತು ಪ್ರಕಾಶಮಾನವಾದ ಬೆಳಕು ವಿಮಾನದ ಬಾಗಿಲ ಮೇಲೆ ಕೇಂದ್ರಿಕರಿಸಲ್ಪಟ್ಟಿತು; ಮೆಟ್ಟಿಲುಬಾಗಿಲು ಬಳಿ ಉರುಳುತ್ತಾ ನಿಂತವು; ವಾದ್ಯವೃಂದದವರು "Hail to the Chief" ಎಂದು ಬಾರಿಸಿದರು. ಬಾಗಿಲು ತರೆಯಿ ಅಧ್ಯಕ್ಷರು ಜಿಗಿದರು, ಕಟಾಂಜನವನ್ನು ಕೆಳಕ್ಕೆ ಜಾರಿಸಿದರು, ವಿದೇಶದ ಮುಖ್ಯಸ್ಥನಾದ ಆತನ ಪಾದಗಳೆಡೆ ಹಾಸ್ಯದ ಹೊಳೆಯ ಜೊತೆ ಆತನ ಪ್ರದೇಶವನ್ನು ಪರಿಗಣಿಸುವಂತೆ "ನೀವೆಲ್ಲರೂ" ಎನ್ನುತ್ತಾ ರಥಗಳ ಜೋಡಿಯನ್ನು ತಿರುಗಿಸಿದರು! ವಾಸ್ತವವಾಗಿ, ನಾವು ಕೇವಲ ಇಂಥ ದೃಷ್ಯವನ್ನು ಊಹಿಸಿಕೊಳ್ಳಬಹುದು: ಅಧ್ಯಕ್ಷರು ಆ ರೀತಿಯಲ್ಲಿ ವರ್ತಿಸುವುದಿಲ್ಲ. ಆ ಸ್ಥಾನದಲ್ಲಿ ಇರುವವರಿಗೆ ಇಂಥ ನಡತೆಯು ಯೋಗ್ಯವಲ್ಲ.

ಶಿಶುವೊಂದು ಚರ್ಚಿಗೆ ಬರುವಾಗ ತನ್ನ ಬೆರಳನ್ನು ಬಾಯಲಿಲಟ್ಟಿರುತ್ತಾನೆ, ತನ್ನ ಸುರಕ್ಷಾ ಬ್ಲಾಂಕೆಟನ್ನು ತನ್ನ ಮೂಗಿನ ಕೆಳಗೆ ಹಿಡಿಸಿರುತ್ತಾನೆ, ಆರಾಧನೆಯು ಪ್ರಾರಂಭಗೊಳ್ಳುವ ಮೊದಲು ಜೋರಾಗಿ ಅಳಲು ಪ್ರಾರಂಭಿಸುತ್ತಾನೆ, ಅದು ಏನೂ ಅಲ್ಲ ಎಂದು ನಾವು ಯೋಚಿಸುತ್ತೇವೆ. ಅದೆಲ್ಲವುಗಳು ನಮಗೆ ತಿಳಿದಿರುವಂಥಹ ಶಿಶುಗಳ ನಡತೆಯೇ ಆಗಿದೆ. ಆದರೆ ಐವತ್ತು ವರ್ಷದ ವಯಸ್ಕನೊಬ್ಬನು ತನ್ನ ಬಾಯಲ್ಲಿ ಬೆರಳಿಟ್ಟುಕಂಡು ತನ್ನ ಸುರಕ್ಷಾ ಬ್ಲಾಂಕೆಟನ್ನು ತನ್ನ ಮೂಗಿನ ಕೆಳಗೆ ಹಿಡಿದುಕೊಂಡು ಆರಾಧನೆಯು ಪ್ರಾರಂಭಗೊಳ್ಳುವ ಮೊದಲು ಜೋರಾಗಿ ಅಳಲು ಪ್ರಾರಂಭಿಸಿದರೆ; ಆಗ ನಾವು "ಇದು ವಿಲಕ್ಷವಾದುದ್ದು, ಏನೋ ತಪ್ಪಾಗಿದೆ" ಯೋಚಿಸುವವರಾಗುತ್ತೇವೆ. ಬೆಳದ ಮನುಷ್ಯನು ಈ ರೀತಿಯಲ್ಲಿ ವರ್ತಿಸಲಾರನು. ಶಿಶುವಿಗೆ ಯೋಗ್ಯವಾದ ನಡವಳಿಕೆಯು ದೊಡ್ಡವರಿಗೆ ಯೋಗ್ಯವಾದದ್ದಲ್ಲ.

ಯೋಹಾನನು ಅಂಥದ್ದನ್ನೇ ಹೇಳುವವನಾಗಿದ್ದಾನೆ: ಕ್ರೈಸ್ತರು ಪಾಪಮಾಡಬಾರದು ಯಾಕೆಂದರೆ ದೇವರ ಅನ್ಯೋನ್ಯತೆಯಲ್ಲಿ ಇರುವವರಿಗೆ ತಕ್ಕುವದಲ್ಲ! ನೀವು ಬೇರೆಯವರನ್ನು ಪಾಪದಲ್ಲಿ ಸೇರಿಸಲು ಇಚ್ಛಿಸುವುದಿಲ್ಲ ಎಂಬುದಕ್ಕೆ ಕಾರಣವನ್ನು ನೀವು ಎದುರು ನೋಡುವವರಾಗಿದ್ದಾದರೆ ಇದೋ ಇಲ್ಲಿದೆ: *ಕ್ರೈಸ್ತರು ಹಾಗೆ ಮಾಡಲಾರರು!* ಪಾಪವು ಕ್ರೈಸ್ತರಿಗೆ ತಕ್ಕದಾದ ನಡವಳಿಕೆಯು ಅಲ್ಲ.

## ಕ್ರೈಸ್ತರು ಪಾಪಮಾಡಬಾರದಾದಾಗ್ಯೂ ಅವರು ಪಾಪ ಮಾಡುವರು

"ಆದರೆ ಯಾವನಾದರೂ ಪಾಪ ಮಾಡಿದ್ದಾದರೆ ... *ನೀವು ಪಾಪಮಾಡಬಾರದೆಂದು* ನಾನು ಈ ಮಾತುಗಳನ್ನು ಬರೆಯುತ್ತಿದ್ದೇನೆ" ಎಂದು ಯೋಹಾನನು ಹೇಳುತ್ತಾನೆ. ಕ್ರೈಸ್ತನು ಪಾಪಮಾಡಬಹುದಾದ ನೈಜ ಸಾಧ್ಯತೆಗಳು ಅಲ್ಲಿವೆ. ಯೋಹಾನನು ಈ ಸಂದರ್ಭದಲ್ಲಿ ಬಲವಾದ ಭಾಷೆಯನ್ನು ಬಳಸುವವನಾಗಿದ್ದಾನೆ. "ನಮ್ಮಲ್ಲಿ ಪಾಪವಿಲ್ಲವೆಂದು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬುದು ನಮ್ಮಲ್ಲಿ ಇಲ್ಲ ... ನಾವು ಪಾಪ ಮಾಡಲಿಲ್ಲವೆಂದು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬುದು ನಮ್ಮಲ್ಲಿ ಇಲ್ಲ ... ನಾವು ಪಾಪಮಾಡಲಿಲ್ಲವೆಂದು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತವೆ, ಮತ್ತು ಸತ್ಯವೆಂಬುದು ನಮ್ಮಲ್ಲಿ ಇಲ್ಲ ... ನಾವು ಪಾಪಮಾಡಲಿಲ್ಲ ವೆಂದು ಹೇಳಿದರೆ ಆತನನ್ನು ಸುಳ್ಳುಗಾರನನಾಗಿ ಮಾಡುತ್ತೇವೆ ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ" (1 ಯೋಹಾನ 1:8-10). ನಿಶ್ಚಿತವಾಗಿ, ಕೈಸ್ತರು ಹಾಗೆ ಮಾಡಬಹುದು ಮತ್ತು ಪಾಪಮಾಡಬಹುದು. ಕ್ರೈಸ್ತರು ಮತ್ತು ಅಕ್ರೈಸ್ತರ ಮಧ್ಯದ ವ್ಯತ್ಯಾಸವು ಅಕ್ರೈಸ್ತರು ಪಾಪಿಗಳು ಮತ್ತು ಕ್ರೈಸ್ತರು ಆ ರೀತಿಯಲ್ಲಿ ಇಲ್ಲ ಎಂದಲ್ಲ. ಬದಲಾಗಿ ಕ್ರೈಸ್ತರು ಪಾಪಿಗಳಾಗಿದ್ದು ದೇವರ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದಾರೆ ಆದರೆ ಅಕ್ರೈಸ್ತರು ಕಾಲಾವಧಿಯಿಂದ ಪಾಪಿಗಳಾಗಿದ್ದಾರೆ!

ಕ್ರೈಸ್ತರು ಪಾಪಿಗಳಾಗಿದ್ದಾರೆಂದು ಕೇವಲ ತಿಳಿದುಕೊಳ್ಳುತ್ತಾ ತಿರುಗಿ ಕ್ರೈಸ್ತರು ವ್ಯಕ್ತಿಗತ ಶಿಷ್ಯರಿಗೆ ಸಹಾಯಮಾಡಬಹುದಾಗಿದೆ. ಕ್ರೈಸ್ತರು ಪಾಪಿಗಳಾಗಿದ್ದಾರೆಂದು ಮುನ್ನೆಚ್ಚರವನ್ನು ಅವರಿಗೆ ಕೊಟ್ಟಿದ್ದಾದರೆ, ಅವರು ತಮ್ಮನ್ನು ತಾವು ಪಾಪದಿಂದ ರಕ್ಷಿಸಿಕೊಳ್ಳುವಾಗ ಅವರು ನಿರಾಶರಾಗಲಾರರು. ಕ್ರೈಸ್ತರಂತೆ ನೀನೂ ಕೂಡಾ ಪಾಪಮಾಡಿದ್ದೀಯಾ? ಪ್ರತಿಯೊಬ್ಬರು ಇತರ ಕ್ರೈಸ್ತರು ಹಾಗೆಯೇ ಇದ್ದಾರೆಯೇ! ನೀನು ಪಾಪದಲ್ಲಿ ಇದ್ದೀಯೆಂದು ನೀನು ಹೊರಬರದಿರು. ಪಾಪಮಾಡುವದು ತೀರ್ಪಿಗೆ ಒಳಗಾಗುವತ್ತ ನಡೆಸುವುದಿಲ್ಲ. ಆದರೆ ಹೊರಬರುವದು ಇದಕ್ಕೆ ನಡೆಸುವುದಾಗಿದೆ.

ಹೇಗೋ, ನಾವು ಪಾಪಮಾಡುತ್ತೇವೆಂದು ಅರಿತುಕೊಳ್ಳುವದು ಸಮಸ್ಯೆಯನ್ನು ಒಡ್ಡುವುದಾಗಿದೆ. ನಾವು ಪಾಮಾಡಬಾರದು ಎಂದು ಹೇಳಿಕೂಡ ಪಾಪಮಾಡುತ್ತೇವೆ. ಇದು ತದ್ವಿರುದ್ಧವಾದ್ದಲ್ಲವೇ, ಆದರೆ ನಾವು ಮಾನವರಾಗಿದ್ದೇವೆ. ನಾವು ಪಾಪವನ್ನು ಮಾಡುವ ಹಾಗಿಲ್ಲವಾದರೆ, ಹಾಗೆ ಮಾಡಿದ್ದಾದರೆ, ನಾವು ಎಷ್ಟರಮಟ್ಟಿಗೆ "ಪಾಪದಿಂದ ದೂರವಿರಲು" ಸಾಧ್ಯ ಮತ್ತು ನಿತ್ಯತ್ವದ ರಕ್ಷಣೆಯಲ್ಲಿ ನಾವು ಮುಂದುವರೆಯಲು ಹೇಗೆ ಸಾಧ್ಯ? ಯೋಹಾನ 1ರ ಪರಿಚ್ಛೇದದಲ್ಲಿ ಯೋಹಾನನು ಎರಡು ಬೇರೆ ರೀತಿಯಲ್ಲಿ ಬಹಶಃ ಕಷ್ಟದಾಯಕವಾಗಿ ಸಮಸ್ಯೆಯನ್ನು ಪರಿಹರಿಸಲು ಸಹಾಯಿಸಿದ್ದಾನೆ:

> ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡಲು; ಪಾಪಮಾಡುವವನು ಆತನನ್ನು ಕಣ್ಣಾರ ಕಂಡವನೂ ಅಲ್ಲ, ತಿಳಿದವನೂ ಅಲ್ಲ. ಪ್ರೀಯರಾದ ಮಕ್ಕಳೇ, ... ಪಾಪಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ಆದಿಯಿಂದಲೂ ಪಾಪ ಮಾಡುವವನಾಗಿದ್ದಾನಲ್ಲಾ ... ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡಿದೆ ಅವನು ದೇವರಿಂದ ಹುಟ್ಟಿದ ಕಾರಣ ಪಾಪಮಾಡುವವನಾಗಿರಲಾರನು (1 ಯೋಹಾನ 3:9).

> ದೇವರಿಂದ ಹುಟ್ಟಿದವನು ಪಾಪಮಾಡುವವನಲ್ಲವೆಂದು ನಮಗೆ ಗೊತ್ತದೆ ... (1 ಯೋಹಾನ 5:18).

ಪಾಪಮಾಡುವದು ಕ್ರೈಸ್ತನಿಗೆ ಸಂಪೂರ್ಣವಾಗಿ ಅಸಾಧ್ಯವೆಂದು ಯೋಹಾನನ ಅರ್ಥವೇ? ನಿಶ್ಚಿತವಾಗಿಯೂ ಇಲ್ಲ, ಹಾಗಿದ್ದ ಪಕ್ಷದಲ್ಲಿ ಆತನು 1 ಯೋಹಾನ 1:8, 10; 2:1 ರಲ್ಲಿ ಹೇಳಿದಂತದ್ದನ್ನು ವ್ಯತಿರಿಕ್ತವಾಗುತ್ತದೆ. ಆಗ ಆತನ ಅರ್ಥವು ಏನಾಗಿತ್ತು?

ಈ ಪ್ರಶ್ನೆಗೆ ಉತ್ತರವು ಮೂಲಭಾಷೆಯಲ್ಲಿನ ಕಾಲಗಳ ಕ್ರಿಯಾಪದಗಳಲ್ಲಿ ಅಡಗಿದೆ. ಗ್ರೀಕ ನಲ್ಲಿ ಕ್ರಿಯೆಯ ನಿರಂತರವಾಗಿಸುವಿಕೆಯ ವಿಚಾರವನ್ನು ಹೊತ್ತಿರುವ ಈ ಕ್ರಿಯಾಪದಗಳು ವರ್ತಮಾನ ಕಾಲದಲ್ಲಿ ಇವೆ. ಅವುಗಳು ಅಕ್ಷರ ಸಹ ಯೋಹಾನನು ಏನ ಹೇಳಿದ್ದಾನೋ ಹಾಗೆಯೇ ಭಾಷಾಂತರಗೊಂಡಿದೆ. ಇಲ್ಲಿ "ಮುಂದುವರೆಯುತ್ತಾ ... ಇವೆ" ಎಂಬುದನ್ನು ನೋಡುತ್ತೇವೆ. ಅದು:

> ಆತನಲ್ಲಿ ನೆಲೆಗೊಂಡಿರುವುದನ್ನು ಮುಂದುವರೆಸಿರುವುದ್ದರಿಂದ ಆತನು ಪಾಪದಲ್ಲಿ ಮುಂದುವರೆಯುವನು ...
>
> ಆತನು ಸೈತಾನನಲ್ಲಿ ಮುಂದುವರೆದದ್ದರಿಂದ ಪಾಪವನ್ನು ಒಪ್ಪಿಕೊಳ್ಳುತ್ತಾನೆ ...
>
> ದೇವರಲ್ಲಿ ಹುಟ್ಟಿರುವವನು ಪಾಪವನ್ನು ಒಪ್ಪಿಕೊಳ್ಳುವುದರಲ್ಲಿ ಮುಂದುವರೆಯನು ...
>
> ಆತನು ದೇವರಲ್ಲಿ ಹುಟ್ಟಿರುವುದರಿಂದ ಆತನು ಪಾಪಮಾಡುವದನ್ನು ಮುಂದುವರೆಸನು ...
>
> ದೇವರಲ್ಲಿ ಹುಟ್ಟಿದ ಯಾವನಾದರೂ ಪಾಪದಲ್ಲಿ ಮುಂದುವರೆಯನು ...

ಕ್ರೈಸ್ತರು ಪಾಪಗಳಾಗಿದ್ದಾರೆ, ಎಲ್ಲ ಸರಿ; *ಆದರೆ ಅವರು ಪಾಪದಲ್ಲಿ ಮುಂದುವರೆಯಕೂಡದು ಎಂಬದು ಯೋಹಾನನ ಬೋಧನೆಯಾಗಿದೆ!* ಅವರು ಪಾಪದ ಅಭ್ಯಾಸ ಮಾಡಿಕೊಂಡಿರಬಾರದು. ಪಾಪವು ಮುಖ್ಯ ಗುಣಲಕ್ಷಣ ಅಥವಾ ಮಾರ್ಗದರ್ಶಕ ತತ್ವ ಅಥವಾ ಅವರ ಜೀವಿತದ ಮುಖ್ಯ ಪ್ರವೃತ್ತಿ ಆಗರಬಾರದು. ಆತನು ಕ್ರೈಸ್ತರನ್ನು ಪಾಪಮಾಡದೇ ಇರಲು ಹೆಣಗಡುತ್ತಿರುವವರಂತೆ ಆದರೆ ಕೆ ಸಂದರ್ಭದಲ್ಲಿ ಪಾಪದ ಆಮಿಷಗಳಿಗೆ ಒಳಗಾಗುವ ಚಿತ್ರವನ್ನು ಅವನು ಚಿತ್ರಿಸಿದ್ದಾನೆ. ಆತನು ಸಹಜವಾಗಿ, ಅಭ್ಯಾಸಬಲದಿಂದ, ದೇವರ ಮಾರ್ಗದಲ್ಲಿ ನಡೆಯುತ್ತಾನೆ, ಆದರೆ ಕೆಲಸಾರಿ ಆತನು ಮುಗ್ಗರಿಸುತ್ತಾನೆ ಮತ್ತು ಬೀಳುತ್ತಾನೆ. ಆತನ ಜೀವಿತದ ಉದ್ದೇಶ ಮತ್ತು ಗುರಿ ನೀತಿವಂತಿಕೆ ಆಗಿರುತ್ತದೆ. ಆದರೆ ಆತನು ಕ್ವಚಿತ್ತವಾಗಿ ಪಾಪಕ್ಕೆ ಒಳಪಡುತ್ತಾನೆ.

ಉದಾಹರಣೆಗಾಗಿ, ಒಬ್ಬ ಜಯಿಸುವ ಕ್ರೀಡಾಪಟು ಅಥವಾ ಒಂದು ಗುಂಪು ಏನು ಮಾಡಬಹುದು ಎಂದು ಯೋಚಿಸಿ; ಒಬ್ಬ ಶ್ರೇಷ್ಟ ಗೋಲ್ಫರ್, ಪ್ರತಿಯೊಂದೂ ಹೋಲಿನಲ್ಲಿ ಸರಿಸಮಾನತೆಯನ್ನು (ಒಂದರಲ್ಲಿ ಬಲು ಕಡಿಮೆ ಹೋಲಿರುವ) ಮಾಡಲು ಅಥವಾ ಪ್ರತಿಯೊಂದು ಟೂರ್ನಾಮೆಂಟಿನಲ್ಲಿ ಗೆಲ್ಲಲು ಪ್ರತಿಯೊಂದು ಹೊಡೆತನವನ್ನು ನೆರವಾಗಿ ಹೊಡೆಯಲಾರನು. ಆದರೆ ಆತನು ಬಹುವಾಗಿರುವದಕಿಂತ ಹೆಚ್ಚು ಒಳ್ಳೆಯದಾಗಿ ಮಾಡಬಹುದು ಮತ್ತು ತನ್ನ ಪಾನ್‌ಗಿಂತ ಹೆಚ್ಚಿನದನ್ನು ಗೆಲ್ಲಬಹುದು ... ಬೇಸಬಾಲ್‌ನಲ್ಲಿ ಒಳ್ಳೆಯ ಹೊಡೆತಗಾರನು ತಾನು ಬ್ಯಾಟ್ ಮಾಡಿದ ಪ್ರತಿಸಾರಿಯೂ ಹೋನ್ ರನ್ನ್‌ನನ್ನು ಮಾಡಲಾರನು. ವಾಸ್ತವವಾಗಿ, ಆತನು ಪ್ರತಿಸಾರಿ ಫಲಕದ ಕಡೆಗೆ ನಡೆಯುತ್ತಾ ಓಟವನ್ನೂ ಕೂಡಾ ಪಡೆಯಲಾರನು. ಆದರೆ ಆತನು ಫಲಕದಡೆಗೆ ಬಂದಾಗ ಏನೋ ಒಳ್ಳೆಯದು ಸಂಭವಿಸುತ್ತದೆ ಎಂಬ ನಿಮ್ಮ ಅಪೇಕ್ಷಿಸುವ ಬೇಕಾದಷ್ಟು ಹೊಡೆತಗಳನ್ನು ಆತನು ಪಡೆಯುತ್ತಾನೆ ... ದೊಡ್ಡದಾದ ಫುಟ್‌ಬಾಲ್ ತಂಡವು ತನ್ನ ಆಟವನ್ನು ನಡೆಸುತ್ತಿರುವಾಗ ಪ್ರತಿಬಾರಿಯೂ ಲೆಕ್ಕಾಚಾರದ ಆಡಲಾರದು, ಅಥವಾ ಪ್ರತೀ ಬಾರಿಯೂ first down ನನ್ನು ಮಾಡಲಾರನು. ಆದರೆ ಆಟದಲ್ಲಿ ಗೆಲ್ಲಲು ಇದು ಸಾಕಷ್ಟು first down ಮತ್ತು touchdown ಸಾಕಷ್ಟು ಮಾಡುವುದಾಗಿದೆ.

ಹೀಗೆ ಕ್ರೈಸ್ತರ ವಿಷಯದಲ್ಲೂ ಸತ್ಯವಾಗಿದೆ: ಆತನು ಯಾವಾಗಲೂ ಪಾಪದ ಮೇಲೆ ಜಯವನ್ನು ಸಾಧಿಸಲು, ಆದರೆ ಆತನು ತಾನು ಕಳೆದು ಕೊಂಡಿದ್ದಕ್ಕಿಂತ ಹೆಚ್ಚಿನದನ್ನು ಗೆಲ್ಲುವವನಾಗಿದ್ದಾನೆ. ಯಾವಾಗಲಾದರೂ ಆತನು ಶೋಧನೆಯಿಂದ ತನ್ನ ಯುದ್ಧದಲ್ಲಿ ಸೋತಿ

ದ್ದಾಗಲೂ, ಆತನು ಅದನ್ನು ಚಟವನ್ನಾಗಿ ಮಾಡಿಕೊಳ್ಳಲಾರನು. ಆತನ ಜೀವಿತದ ಒಲವು, ಮಾರ್ಗವು ನೀತಿವಂತಿಕೆಯಾಗಿರುತ್ತದೆಯೋ ಹೊರತು ಪಾಪವಲ್ಲ. ಆತನು ಈಗ ಮತ್ತು ಆಗ ತಪ್ಪಾಗಿ ಹೊಡೆಯಬಹುದು ಆದರೆ ಅನೇಕ ಸಾರಿ ಆತನ ಬಹುತೇ ಎಲ್ಲ "ಹೊಡೆತಗಳು ಒಳಿತಾಗಿರುತ್ತವೆ."

ತಾನು ಪಾಪಮಾಡಬಾರದೆಂಬ ಅರಿವಿನ ಅವಶ್ಯಕತೆಯು ಕ್ರೈಸ್ತನಿಗಿದೆ, ಆದರೂ ಆತನು ಪಾಪದಲ್ಲಿ ಇದ್ದಾನೆ. ಆತನು ಪಾಪ ಮಾಡಿದಾಗ ನಿರಾಶನಾಗುವುದಕ್ಕೆ ಕಾರಣಗಳು ಇಲ್ಲ, ಆದರೆ ಎದ್ದೇಳಲು ಮತ್ತು ನೀತಿವಂತಿಕೆಯ ಜೀವಿತದಲ್ಲಿ ತಿರುಗಿ ಜೀವಿಸುವುದಕ್ಕೆ ಪ್ರಯತ್ನಿಸಲು ಅಲ್ಲಿ ಕಾರಣಗಳು ಇವೆ.

## ಕ್ರೈಸ್ತರು ಪಾಪಮಾಡಿದಾಗ, ದೇವರು ಪರಿಹಾರಹಾರವನ್ನು ಒದಗಿಸುವವನಾಗಿದ್ದಾನೆ

"... ಯಾವನಾದರೂ, *ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸುಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ. ಆತನು ನಮ್ಮ ಪಾಪಗಳು ನಿವಾರಣೆ ಮಾಡುವ ಯಜ್ಞವಾಗಿದ್ದಾನೆ.* ನಮ್ಮ ಪಾಪಗಳು ಮಾತ್ರವಲ್ಲದೇ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣೆಮಾಡುತ್ತಾನೆ" (1 ಯೋಹಾನ 2:1, 2; ಒತ್ತಿ ಹೇಳಿದ್ದು ನನ್ನದು) ಎಂದು ಯೋಹಾನನು ಹೇಳುತ್ತಾನೆ.

ನಾವು ಪಾಪಮಾಡಬಾರದು ಆದರೆ ನಾವು ಪಾಪ ಮಾಡುತ್ತೇವೆ ಎಂದು ಯೋಹಾನನು ಹೇಳುತ್ತಾನೆ. ಅದು ಕೆಟ್ಟ ಸುದ್ಧಿಯಾಗಿದೆ. ನಂತರ ಬರುವದು ಒಳ್ಳೆಯ ಸಾಮಾಚಾರ. ಅದು: ನಾವು ಪಾಪದಲ್ಲಿ ಇದ್ದಾಗ ಕ್ಷಮಿಸಲ್ಪಡುವ ವ್ಯವಸ್ಥೆಯನ್ನು ದೇವರು ನಮಗಾಗಿ ಇಟ್ಟಿದ್ದಾನೆ! ನಾನು ಪಾಪಿಯಾಗಿದ್ದಾಗಲೂ ಕೂಡಾ ನಾನು ಕ್ಷಮಿಸಲ್ಪಡಬಹುದು ಮತ್ತು ನಾನು ಇನ್ನೂ ಪರಲೋಕಕ್ಕೆ ಹೋಗಬಹುದು ಎಂದೂ ಆ ಸಂದೇಶವು ನನಗೆ ಹೇಳುವುದಾಗಿದೆ!

ಯಾವ ಅರ್ಥದಿಂದ ಈ ಕ್ಷಮಾಪಣೆಯು ಸಾಧಿಸಲ್ಪಡುವದು? ದೇವರ ವ್ಯವಸ್ಥೆಯು ಸರಳವಾಗಿ ಈ ರೀತಿಯದ್ದಾಗಿದೆ: ಅದುಯೇಸು ಕ್ರಿಸ್ತನೇ. ಆತನು ನಮ್ಮ ಸಹಾಯಕನೂ, ನಮಗಾಗಿ ತಂದೆಯ ಬಳಿಯಲ್ಲಿ ವಾದಮಾಡುವವನೂ ಆಗಿದ್ದಾನೆ. ಆತನು ನಮ್ಮ ಪಾಪಗಳಿಗೆ ಪ್ರಾಯಶ್ಚಿತವಾಗಿದ್ದಾನೆ. "ಅರ್ಥಾತ್ ಪಾಪವನ್ನು ಮುಚ್ಚುವಂತವನೂ ಮತ್ತು ಮನ್ನಿಸುವಂತವನೂ ಆಗಿದ್ದಾನೆ."[1] ಆತನ ರಕ್ತದ ಮೂಲಕ ನಮ್ಮಪಾಪಗಳು ಕ್ಷಮಿಸಲ್ಪಟ್ಟವು (1 ಯೋಹಾನ 1:7).

ಕ್ಷಮಾಪಣೆಗೋಸ್ಕರ ಮತ್ತು ನಿತ್ಯ ರಕ್ಷಣೆಗೋಸ್ಕರ ನಾವು ಯಾವ ಆಧಾರದ ಮೇಲೆ ನಿರೀಕ್ಷೆಯನ್ನು ಇಡಬೇಕು? ನಮ್ಮ ಸ್ವಾಭಾವಿಕ ಒಳ್ಳೇ ತನದ ಆಧಾರದ ಮೇಲೆಯೋ? ನಮ್ಮ ಒಳ್ಳೇಯ ಕಾರ್ಯಗಳಿಂದಲೋ? ಕ್ರಿಸ್ತೀಯ ಜೀವಿತವನ್ನು ಖಚಿತವಾಗಿ ಜೀವಿಸುತ್ತಿರುವುದರಿಂದಲೋ ಇಲ್ಲ! ಆದರೆ ದೇವರ ಕೃಪೆಯ ಮತ್ತು ಕ್ರಿಸ್ತನ ರಕ್ತದ ಆಧಾರದ ಮೇಲೆ ಇರುವುದಾಗಿದೆ! ನಾವು ಕ್ಷಮಿಸಲ್ಪಟ್ಟಿರುವದು, ನಾವು ದೇವರಿಗೋಸ್ಕರ ಏನು ಮಾಡಿದ್ದೇವೆ ಎಂಬ ಕಾರಣದಿಂದ ಅಲ್ಲ, ಆದರೆ ದೇವರು ನಮಗಾಗಿ ಏನು ಮಾಡಿದ್ದಾನೆ ಎಂಬ ಕಾರಣದಿಂದಲೇ!

## ಕ್ರೈಸ್ತರು ತಮ್ಮ ಪಾಪಗಳಿಗೋಸ್ಕರ ದೇವರ ಪರಿಹಾರವನ್ನು ಪಡೆಯಲು ಏನಾದರೂ ಮಾಡಲೇಬೇಕು

ಕ್ರೈಸ್ತರಿಗೆ ಕ್ರಿಸ್ತನ ಮೂಲಕ ದೇವರು ಒದಗಿಸಿದ ಕ್ಷಮಾಪಣೆಯು ಶರತ್ತುದಾಯಕವಾದದ್ದು ಎಂಬುದನ್ನು ಯೋಹಾನನೂ ಸೂಚಿಸಿದ್ದಾನೆ. ಆ ಕ್ಷಮಾಪಣೆಯನ್ನು ಪಡೆಯಲು ಕ್ರೈಸ್ತರು ಏನನ್ನಾದರು ಮಾಡಲೇಬೇಕು.

ಇದಕ್ಕಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲ. ನಾವು ಮೂಲತಃವಾಗಿ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ, ಆದರೆ ಅದು ಕೇವಲ ನಾವು ಕ್ಷಮೆಯ ಶರತ್ತನ್ನು ಅಂದರೆ ನಾವು ನಂಬಿ, ಒಪ್ಪಿಕೊಂಡು, ಪಶ್ಚಾತ್ತಾಪಟ್ಟು, ಮತ್ತು ದೀಕ್ಷಾಸ್ನಾನಹೊಂದುವುದನ್ನು ಮುಟ್ಟುವ ಮೂಲಕವಾಗಿ ನಾವು ಅದನ್ನು ಒಪ್ಪಿಕೊಳ್ಳಬಹುದು. ಆದ್ದರಿಂದ ಕ್ರಿಸ್ತನ ಕೃಪೆಯ ಮೂಲಕ ರಕ್ಷಿಸಲ್ಪಡುವುದನ್ನು ಮುಂದುವರೆಸುವದಕ್ಕಾಗಿ ಏನನ್ನಾದರೂ ಮಾಡಬೇಕು ಎಂದು ನಮಗೆ ಕೇಳಲ್ಪಡುವದು ಅಯೋಗ್ಯವಾದುದ್ದು ಅಲ್ಲ.

ಆದರೆ ಕ್ರೈಸ್ತರು ಯಾವುದರಿಂದ ಪಾಪ ಕ್ಷಮಾಪಣೆ ಹೊಂದಬೇಕೆಂದು ದೇವರು ಬಯಸುವವನಾಗಿರುತ್ತಾನೆ? ರಕ್ಷಣೆಯಲ್ಲಿ ಮುಂದುವರೆಯುವುದಕ್ಕಾಗಿ ನಾವು ಏನನ್ನು ಮಾಡಬೇಕು? ಈ ಶೀರ್ಷಿಕೆಯಡಿ ಮೂರು ಅಥವಾ ನಾಲ್ಕು ಸಂಗತಿಗಳನ್ನು ಯೋಚಿಸಲು ನಾನು ಯತ್ನಿಸಿದೆನು. ಆದರೆ ದೇವರಿಗೆ ನಮ್ಮಲ್ಲಿ ಅವಶ್ಯವಿರುವದು ನಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆಯಲು ಎರಡು ಅಥವಾ ಮೂರು ಸಂಗತಿಗಳಲ್ಲ - *ಒಂದೇ ಒಂದು ಸಂಗತಿ* ಎಂದು ಅಂತಿಮವಾಗಿ ನಾನು ಈ ನಿರ್ಧಾರಕ್ಕೆ ಬಂದೆನು! 1 ಯೋಹಾನ 1:7ರಲ್ಲಿ ಆ *ಒಂದು ಸಂಗತಿ* ಯಾವದು ಎಂದು ಯೋಹಾನನು ನಮಗೆ ಹೇಳುತ್ತಾನೆ. ಒಬ್ಬ ಕ್ರೈಸ್ತನು ತನ್ನ ಪಾಪಗಳಿಂದ ಶುದ್ಧನಾಗಿ ಇರಬೇಕಾದರೆ ಅವಶ್ಯವಾಗಿ ಇರಬೇಕಾದ ಒಂದು ಸಂಗತಿ ಎಂದರೆ "ಬೆಳಕಿನಲ್ಲಿ ನಡೆಯುವದು" ಆಗಿದೆ!

ಕೆಲವರು ಇದಕ್ಕೆ ಅಕ್ಷೇಪಣೆ ಮಾಡುತ್ತಾರೆ: "ಪಶ್ಚಾತ್ತಾಪದ ಬಗೆಗೆ ಏನು ಹೇಳುತ್ತಿ - ಅದು ಅವಶ್ಯವಿಲ್ಲವೇ?" ಹೌದು, ಇದೆ: ಕ್ರೈಸ್ತನು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಡಲೇ ಬೇಕು (ಅಪೊಸ್ತಲರ ಕೃತ್ಯಗಳು 8:22). *ಆತನು ಬೆಳಕಿನಲ್ಲಿ ನಡೆಯುತ್ತಾ, ನಿರಂತರಾಗಿ ಪಶ್ಚಾತ್ತಾಪಪಡುತ್ತಾ ಇರುವಾಗ ಮಾತ್ರ ಇದು ಸಾಧ್ಯ.* ಹೌದು, ಈ ಸಂದರ್ಭದಲ್ಲಿ ಯೋಹಾನನು "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವುದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು" (1 ಯೋಹಾನ 1:9) ಎಂದು ಹೇಳುತ್ತಾನೆ. *ಆದರೆ ಒಬ್ಬ ಕ್ರೈಸ್ತನು ಬೆಳಕಿನಲ್ಲಿ ನಡೆಯುವಾಗ, ಆತನು ನಿರಂತರವಾಗಿ ಅದು ಯಾರಿಗೆ ಸಂಬಂಧಿಸಿದೆಯೋ ಅವರಿಗೆ ಅರಿಕೆ ಮಾಡುತ್ತಲೇ ಇರುತ್ತಾನೆ.* "ಪ್ರಾರ್ಥನೆಯ ಬಗೆಗೆ ಏನನ್ನಿಸುತ್ತದೆ?" ಕ್ರೈಸ್ತನು ಕ್ಷಮಾಪಣೆಗೋಸ್ಕರ ಪ್ರಾರ್ಥಿಸಬಾರದೇ? ನಿಶ್ಚಿತವಾಗಿ (ಅಪೊಸ್ತಲರ ಕೃತ್ಯಗಳು 8:22). *ಆದರೆ ಒಬ್ಬ ಕ್ರೈಸ್ತನು ಬೆಳಕಿನಲ್ಲಿ ನಡೆಯುವಾಗ,* ಆತನು ನಿರಂತರವಾಗಿ ಕ್ಷಮಾಪಣೆಗೋಸ್ಕರ ಪ್ರಾರ್ಥನೆ ಮಾಡುತ್ತಲೇ ಇರುತ್ತಾನೆ. ಆದ್ದರಿಂದ "ಬೆಳಕಿನಲ್ಲಿ ನಡೆಯುವದು" ಪಾಪಕ್ಕಾಗಿ ಪಶ್ಚಾತ್ತಾಪಪಡುವುದನ್ನೂ ಅರಿಕೆಮಾಡುವುದನ್ನೂ, ಕ್ಷಮಾಪಣೆಗೋಸ್ಕರ ಪ್ರಾರ್ಥನೆ ಮಾಡುವುದನ್ನೂ ಒಳಗೊಂಡಿದೆ. ಹೀಗೆ, ಕ್ರೈಸ್ತರಾದಂತವರು ಕ್ಷಮಾಪಣೆಯನ್ನು ಪಡೆಯಲು ಮಾಡಬೇಕಾದದ್ದು ಅಲ್ಲಿ ಮೂರು ಸಂಗತಿಗಳಲ್ಲ. ಅಲ್ಲಿ ಅವಶ್ಯವಿರುವದು ಒಂದೇ ಒಂದು ಸಂಗತಿ ಎಂದರೆ "ಬೆಳಕಿನಲ್ಲಿ ನಡೆಯುವದು."

ಆದರೆ "ಬೆಳಕಿನಲ್ಲಿ ನಡೆಯುವದು" ಎಂಬುದರ ಅರ್ಥವೇನು? ಇದರರ್ಥ "ಪಾಪ ರಹಿತವಾಗಿ ಜೀವಿಸುವದು" ಎಂದು ಅಲ್ಲ. ಇದರರ್ಥ "ಪಾಪರಹಿತವಾಗಿ ಜೀವಿಸುವದು" ಆಗಿದ್ದಾದರೆ, ಯೇಸುವಿನ ರಕ್ತವು ನಮ್ಮ ಪಾಪಗಳಿಂದ ಶುದ್ಧಿಗೊಳಿಸುವುದಾಗಿದೆ. ಆದರೆ "ಪಾಪರಹಿತವಾಗಿ ಜೀವಿಸಿದರೆ ಕ್ಷಮಾಪಣೆಗಾಗಿ ನಮ್ಮಲ್ಲಿ ಪಾಪವು ಇರುವುದಿಲ್ಲ!" ಆದ್ದರಿಂದ "ಬೆಳಕಿನಲ್ಲಿ ನಡೆಯುವದು" ಇದರ ಅರ್ಥವು ಪಾಪರಹಿತವಾಗಿ ಜೀವಿಸುವದು ಎಂದಲ್ಲ.

ಹಾಗಾದದ್ದಾದರೆ ಅದರ ಅರ್ಥವೇನು? ಕಾರ್ಯತತ್ಪರದ ಪ್ರಯತ್ನದ ಅರ್ಥವು ದೇವರ ವಾಕ್ಯದ ಬೆಳಕಿನ ಪ್ರಕಾರ ಜೀವಿಸಬಹುದು ಎಂದು ನನಗೆ ಕಾಣುತ್ತದೆ.

"ಕಾರ್ಯತತ್ಪರದ ಪ್ರಯತ್ನವು" ಬೆಳಕಿನಲ್ಲಿ ನಡೆಯುವ ಮೂಲವಾಗಿದೆ. ಕ್ರೈಸ್ತರು ಪಾಪರಹಿತವಾಗಿ ಜೀವಿಸಲಾರರು, ಆದರೆ ಆತನು ಯಾವಾಗಲೂ ಕಾರ್ಯತತ್ಪರನಾಗಿರುತ್ತಾನೆ.

ಆತನು ತನ್ನ ಪರಿಸ್ಥಿತಿಗಳಲ್ಲಿ ಒಳ್ಳೆಯದನ್ನೇ ಮಾಡುವನಾಗಿರುವವನೂ ಆಗಿರುತ್ತಾನೆ ಆದರೆ ಆತನು ಯಾವಾಗಲೂ ತನ್ನ ಗುರಿಯನ್ನು ಸಂಪೂರ್ಣಗೊಳಿಸಲು ಕಾರ್ಯಮಾಡುವವನಾಗಿರುತ್ತಾನೆ. ಆತನು ಅದನ್ನು ಮಾಡಿದ್ದಾದರೆ ನಾವು ಆತನನ್ನು "ಬೆಳಕಿನಲ್ಲಿ ನಡೆಯುವವಂತೆ" ದೇವರು ಸ್ವೀಕರಿಸುವುದನ್ನು ನಾವು ನಂಬುವವರಾಗಿರುತ್ತೇವೆ.

ನಾವು "ಬೆಳಕಿನಲ್ಲಿ ನಡೆಯು" ವವರಾದರೆ, "ಆತನ ಮಗನಾದ ಯೇಸುವಿನ ರಕ್ತವು ನಮ್ಮ ಎಲ್ಲಾ ಪಾಪಗಳಿಂದ ರಕ್ಷಿಸುವುದಾಗಿದೆ" ಎಂಬ ಆಶೀರ್ವಾದಿತ ವಾಗ್ದಾನವನ್ನು ನಾವು ಹೊಂದುವವರಾಗಿದ್ದೇವೆ. ಇಲ್ಲಿ ಮತ್ತೇ ವರ್ತಮಾನ ಕಾಲದ ಕ್ರಿಯಾಪದವು ಉಪಯೋಗಿ ಸಲ್ಪಟ್ಟಿದೆ: ಮುಂದುವರೆದ ಒಪ್ಪಿಕೊಳ್ಳುವಿಕೆಯ ಕಾರ್ಯವು ಇಲ್ಲಿ ಒತ್ತಿ ಹೇಳಲ್ಪಟ್ಟಿದೆ. ನಾವು ಅದನ್ನು: "ನಾವು ಬೆಳಕಿನಲ್ಲಿ ನಡೆಯುವುದನ್ನು ಮುಂದುವರೆಸಿದ್ದಾದರೆ ನಾವು ಒಬ್ಬರ ಜೊತೆ ಒಬ್ಬರು ಅನ್ಯೋನ್ಯತೆಯನ್ನು ಹೊಂದುತ್ತೇವೆ ಮತ್ತು ಯೇಸುವಿನ ರಕ್ತವು ನಿಮ್ಮನ್ನು ಎಲ್ಲಾ ಪಾಪಗಳಿಂದ ನಿರಂತರವಾಗಿ ಶುದ್ಧಗೊಳಿಸುವುದಾಗಿದೆ" ಎಂಬ ರೀತಿಯಲ್ಲಿ ಭಾಷಾಂತರಿಸಬಹುದು. ಬೆಳಕಿನಲ್ಲಿ ನಡೆಸುವ ಕ್ರೈಸ್ತರಾದ ನಾವು ಕ್ರಿಸ್ತನ ಶುದ್ಧಗೊಳಿಸುವ ರಕ್ತದ ಧಾರೆಯೆಡೆಯಲ್ಲಿ ನಿರಂತರವಾಗಿ ನಡೆಯುವವರಾಗಿದ್ದೇವೆ! ನಾವು ಪಾಪಮಾಡಿದ ಕ್ಷಣವೇ ಕ್ರಿಸ್ತನ ರಕ್ತವು ನಮ್ಮನ್ನು ಶುದ್ಧಗೊಳಿಸುವದು ಮತ್ತು ದೇವರು ನಮ್ಮನ್ನು ಕ್ಷಮಿಸುವನು.

ಅದರ ಅರ್ಥ ಕ್ರೈಸ್ತನಾದ ನಾನು ದೇವರ ಚಿತ್ತವನ್ನು ಮಾಡುವಲ್ಲಿ ಕಾರ್ಯತತ್ಪರದ ಪ್ರಯತ್ನದಲ್ಲಿ ಇದ್ದುದಾದರೆ, ನಾನು ಒಂದು ದಿನ ನನ್ನಲ್ಲಿ ಕೆಟ್ಟ ವಿಚಾರವನ್ನು ಹೊಂದಿದುರ ಬಗೆಗೆ ಚಿಂತಿಸದೇ ಮತ್ತು ನಂತರದಲ್ಲಿ ಹೃದಯಾಘಾತವನ್ನು ಹೊಂದಿದ್ದಾದರೆ ಮತ್ತು ಕ್ಷಮಾಪಣೆ ಪ್ರಾರ್ಥಿಸುವುದಕ್ಕಿಂತ ಮುಂಚೆಯೇ ಮರಣವನ್ನು ಹೊಂದಿದ್ದಾದರೆ ನಾನು ನನ್ನ ಪ್ರಾರ್ಥಿಸಲಾರದ ಪಾಪಕ್ಕಾಗಿ ನರಕಕ್ಕೆ ಹೋಗುತ್ತೇನೆ ಎಂದು ಚಿಂತೆ ಮಾಡುವ ಅಗತ್ಯವಿಲ್ಲ! ಬದಲಾಗಿ ನಾನು ಪರಲೋಕ್ಕೆ ಹೋಗುವೆನೆಂಬ ಖಚಿತತೆ ಇದ್ದ ಕಾರಣದಿಂದ, ಅದನ್ನು ಅರಿತು ನಾನು ನಿರಂತರವಾಗಿ ಸಂತೋಷಿಸುವವನಾಗಿದ್ದೇನೆ.

## ಮುಕ್ತಾಯ

ಒಂದು ಪ್ರಶ್ನೆಯು ಇನ್ನೂ ಉಳಿದುಕೊಂಡಿದೆ: ದೇವರ ಮಾರ್ಗದಲ್ಲಿ ದೇವರ ಚಿತ್ತವನ್ನು ಮಾಡುವ "ಕಾರ್ಯತತ್ಪರದ ಪ್ರಯತ್ನ"ದಲ್ಲಿ ನೀನು ಬೆಳಕಿನಲ್ಲಿ ನಡೆಯುವವ ನಾಗಿದ್ದೀಯಾ?

ನೀನು ಚೆನ್ನಾಗಿದ್ದೀಯೆಂದು ನಾನು ಬಲ್ಲೆನು, ನೀನು ಬೆಳಕಿನಲ್ಲಿ ನಡೆಯುವುದಾದರೆ ನಾನು ಹೇಳಬಲ್ಲೆನು. ಕೊನೇಪಕ್ಷ, ಕ್ರೈಸ್ತರಿಗೆ ಬೈಬಲ್ ಓದುವುದರಲ್ಲಿ ಮತ್ತು ಪ್ರಾರ್ಥಿಸುವುದರಲ್ಲಿ ಯಾವ ಅಭಿರುಚಿಯೂ ಇಲ್ಲವೆಂದು, ಅವರು ಲೌಕೀಕ ಚಟುವಟಿಕೆಗಳಲ್ಲಿ ಭಾಗವಹಿಸುವಾಗ, ಅವರು ದೇವರಿಗಾಗಿ ಜೀವಿಸುವ ಎಲ್ಲವನ್ನೂ ಮಾಡುವಲ್ಲಿ ಕಾರ್ಯತತ್ಪರತೆಯ ಪ್ರಯತ್ನದಲ್ಲಿ ಅವರು *ಇಲ್ಲ* ಎಂದು ನನಗೆ ಕಂಡುಬಂದಿದೆ. ಆದರೆ ನನ್ನ ತೀರ್ಪು ನಿನ್ನ ವಿಚಾರದಲ್ಲಿ ತಪ್ಪಾಗಬಹುದು.

ಇನ್ನೊಂದೆಡೆಯಲ್ಲಿ, ನೀನು ಬೆಳಕಿನಲ್ಲಿ ನಡೆಯುತ್ತೀದ್ದಿಯೋ ಇಲ್ಲವೋ ಎಂಬುದೂ ಕೂಡ ನನಗೆ ಖಚಿತವಾಗಿಲ್ಲದಿದ್ದರೂ ಕೂಡ ಅದು ನಿನಗೆ ತಿಳಿದಿದೆ, ನಿನಗೆ ಗೊತ್ತಲ್ಲವೇ? ದೇವರ ವಾಕ್ಯದ ಪ್ರಕಾರವಾಗಿ ಅಥವಾ ಇಲ್ಲದೇ ನೀನು ಜೀವಿಸಲು ಕಾರ್ಯತತ್ಪರತೆಯ ಪ್ರಯತ್ನದಲ್ಲಿರುವದು ನೀನು ತಿಳಿದಿರಬಹುದು. ನೀನು ಇತರರನ್ನು ಮೂರ್ಖರನ್ನಾಗಿಸಬಹುದು ಆದರೆ ಬಹುಶಃ ನಿನ್ನನ್ನು ನೀನು ಮೂರ್ಖನನ್ನಾಗಿಸಲಾರೆ.

ನೀನು ಬೆಳಕಿನಲ್ಲಿ ನಡೆಯುತ್ತಿದ್ದೀಯೋ ಇಲ್ಲವೋ, ಆತನನ್ನು ಹಿಂಬಾಲಿಸಲು ಕಾರ್ಯತತ್ಪರತೆಯ ಶ್ರಮವನ್ನು ಮಾಡುತ್ತಿದ್ದಿಯೋ ಇಲ್ಲವೋ ಎಂಬುದನ್ನು ದೇವರು ನಿಜವಾಗಿ

ತಿಳಿದಿದ್ದಾನೆ. ನೀನು ಇತರರನ್ನು ಮೂರ್ಖರನ್ನಾಗಿಸಬಹುದು ಆದರೆ ಬಹುಶ ನಿನ್ನನ್ನು ನೀನು ಮೂರ್ಖನನ್ನಾಗಿಸಬಹುದು. ಆದರೆ ಬಹುಶಃ ನಿನ್ನನ್ನು ನೀನು ಮೂರ್ಖನನ್ನಾಗಿಸಬಹುದು. ಆದರೆ ದೇವರನ್ನು ಮೂರ್ಖನನ್ನಾಗಿಸಲಾರೆ! ನಿನ್ನಿಂದ ಎಷ್ಟನ್ನು ಅಪೇಕ್ಷಿಸಬಹುದೆಂದು ಆತನು ತಿಳಿದಿದ್ದಾನೆ. ಆತನು ನಿನ್ನ ಹೃದಯವನ್ನು ಬಲ್ಲವನಾಗಿದ್ದಾನೆ ಮತ್ತು ಆತನ ವಾಕ್ಯದ ಮೂಲಕ ಜೀವಿಸುತ್ತ ಎಲ್ಲವನ್ನು ಮಾಡಬಹುದು ಎಂಬ ನಿನ್ನ ಇಂಗಿತವನ್ನೂ ಕೂಡಾ ಆತನು ಬಲ್ಲವನಾಗಿದ್ದಾನೆ. ನೈಜ ಪ್ರಶ್ನೆ ಎಂದರೆ ದೇವರು ಏನನ್ನು ತಿಳಿದಿದ್ದಾನೆ? ದೇವರು ಹೇಗೆ ನಿನ್ನನ್ನು ನೋಡುವವನಾಗಿದ್ದಾನೆ?

---

**ಟಿಪ್ಪಣಿ**

[1]W. E. Vine, *An Expository Dictionary of New Testament Words,* vol. 3 (Old Tappan, N.J.: Fleming H. Revell, 1966 reprint), p. 224.